**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ:27.09.2025 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ ಎಸ್ ಜಿ ವಕೀಲರಿಂದ:**

ನನ್ನ ತಂದೆ ಹೆಸರು ರಂಗೇಗೌಡ ಇರುತ್ತದೆ ಎಂದರೆ ಸರಿ. ಅವರನ್ನು ರಂಗಯ್ಯ ಎಂತಲೂ ಕರೆಯುತ್ತಾರೆ ಎಂದರೆ ಸರಿ. ನನ್ನ ತಂದೆಯವರ ತಂದೆಯ ಹೆಸರು ಕಾಳೇಗೌಡ ಎಂದು ಇರುತ್ತದೆ ಎಂದರೆ ಸರಿ. ನನ್ನ ಅಜ್ಜನಿಗೆ ಮೂವರು ಗಂಡು ಮಕ್ಕಳು ಅವರೆಂದರೆ ನನ್ನ ತಂದೆಯಾದ ರಂಗೇಗೌಡ, ನಿಂಗೇಗೌಡ ಮತ್ತು ಅಣ್ಣೇಗೌಡ ಇರುತ್ತಾರೆ. ನನ್ನ ಅಜ್ಜನ ಹೆಂಡತಿಯ ಹೆಸರು ಸುಬ್ಬಮ್ಮ ಇರುತ್ತದೆ. ನನ್ನ ಅಜ್ಜನಿಗೆ ಸಿದ್ದೇಗೌಡ ಎನ್ನುವ ಯಾವುದೇ ಮಗ ಇರುವುದಿಲ್ಲ.

ಕಾಳೇಗೌಡರ ಒಂದನೇ ಮಗ ಸಿದ್ದೇಗೌಡ ಮತ್ತು ಲೇ.ರಂಗೇಗೌಡರ ಹೆಂಡತಿ ಸುಬ್ಬಮ್ಮ ಯಾರು ಎಂದರೆ ಯಾರು ಎಂದು ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರಿದು ಆ ರೀತಿಯ ವ್ಯಕ್ತಿ ಯಾರೂ ಇರುವುದಿಲ್ಲ ಎಂದು ನುಡಿಯುತ್ತಾರೆ. ರಂಗೇಗೌಡರ ಹೆಂಡತಿ ಸುಬ್ಬಮ್ಮ ಮತ್ತು ಅವರ ಮಕ್ಕಳಾದ ರಂಗಯ್ಯ, ಅಣ್ಣಯ್ಯ ಮತ್ತು ನಿಂಗಯ್ಯ ಯಾರು ಎಂದರೆ ಸಾಕ್ಷಿಯು ಅವರೆಲ್ಲರೂ ಕಾಳೇಗೌಡರ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ರಂಗೇಗೌಡರ ಹೆಂಡತಿ ಸುಬ್ಬಮ್ಮ ಮತ್ತು ಅವರ ಮಕ್ಕಳಾದ ರಂಗಯ್ಯ, ಅಣ್ಣಯ್ಯ ಮತ್ತು ನಿಂಗಯ್ಯ ದಿ: 24.08.1970 ರಲ್ಲಿ ದಾವಾ ಸ್ವತ್ತನ್ನು ವಾದಿಯ ತಂದೆಯಾದ ಬಿ ಆರ್ ರಂಗೇಗೌಡ ಬಿನಿ ಮಂಟಯ್ಯನ ರಂಗೇಗೌಡ ಅವರಿಗೆ ನೋಂದಾಯಿತ ಕ್ರಯಪತ್ರದಂತೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರವು ಬನ್ನೂರಿನ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಾವಣೆಗೊಂಡಿದೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಲ್ಲಿ ಬನ್ನೂರು ಹೋಬಳಿ, ಬಿ.ಬೆಟ್ಟಹಳ್ಳಿ ಗ್ರಾಮಕ್ಕೆ ಸೇರಿದ ಸ.ನಂ.154 ರಲ್ಲಿ ಗ್ರಾಮಠಾಣಾ ವ್ಯಾಪ್ತಿಗೆ ಸೇರಿದ ಪೂಪ 11 ಗಜ ಮತ್ತು ಉ:ದ: 15 ಗಜ ಇರುವ ಆಸ್ತಿಯನ್ನು ವಾದಿಯ ತಂದಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಚಕ್ಕುಬಂದಿಯನ್ನು ಸದರಿ ಕ್ರಯಪತ್ರದಲ್ಲಿ ಪೂರ್ವಕ್ಕೆ ಜೋಗಯ್ಯ ಸೊತ್ತಪ್ಪನವರ ಸ್ವತ್ತು, ಪಶ್ಚಿಮಕ್ಕೆ:ವಾದಿಗಳ ಆಸ್ತಿ, ಉತ್ತರಕ್ಕೆ:ತೋಪಿನ ಕೊಪ್ಪಲು ರಂಗೇಗೌಡರ ಸ್ವತ್ತು ಮತ್ತು ದಕ್ಷಿಣಕ್ಕೆ:ಬೆಟ್ಟಕ್ಕೆ ಹೋಗುವ ದಾರಿ ಎಂದು ನಮೂದು ಇದೆ ಎಂದರೆ ಸರಿಯಲ್ಲ. ನಾನು ನೋಡಿರುವ ಕ್ರಯಪತ್ರದಲ್ಲಿ ಸದರಿ ಆಸ್ತಿಯ ಪೂರ್ವಕ್ಕೆ:ಜೋಗಯ್ಯನ ರಾಮೇಗೌಡ, ಪಶ್ಚಿಮಕ್ಕೆ:ಚಲುವಯ್ಯನ ರಾಮೇಗೌಡ, ಉತ್ತರಕ್ಕೆ:ಬೆಟ್ಟಕ್ಕೆ ಹೋಗುವ ದಾರಿ ಮತ್ತು ದಕ್ಷಿಣಕ್ಕೆ: 4 ಗುಂಟೆ ವಿಸ್ತೀರ್ಣ ವುಳ್ಳ ನಮ್ಮ ಮನೆ ಮತ್ತು ಖಾಲಿ ಜಾಗ ಇರುತ್ತದೆ.

ದಾವಾ ಸ್ವತ್ತು ಮತ್ತು ನಾನು ಹೇಳುವ ಚಕ್ಕುಬಂದಿಯಂತೆ ದಾವಾ ಸ್ವತ್ತಿನ ದಕ್ಷಿಣಕ್ಕೆ ಇರುವ ನಮ್ಮ ಸ್ವತ್ತು ಬೇರೆ ಬೇರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಎರಡೂ ಒಂದೇ ಎಂದು ನುಡಿಯುತ್ತಾರೆ. ವಾದಿಗಳ ದಾವಾ ಸ್ವತ್ತು ಮತ್ತು ನಮ್ಮ ಸ್ವತ್ತು ಬೇರೆ ಬೇರೆ ಆದರೂ ಸಹ ನಾನು ವಾದಿಗಳ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳುಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಈ ಮೊದಲು ವಾದಿಯ ವಿರುದ್ಧ ಹೂಡಿದ್ದ ಒ ಎಸ್ 65/2002 ರ ದಾವೆಯಲ್ಲಿ ನಾನು ತೋರಿಸಿರುವ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೇ:ಜೋಗಯ್ಯನ ರಾಮೇಗೌಡ, ಪಶ್ಚಿಮಕ್ಕೇ:ಚಲುವಯ್ಯನ ರಾಮೇಗೌಡ, ಉತ್ತರಕ್ಕೇ:ಬೆಟ್ಟಕ್ಕೆ ಹೋಗುವ ರಸ್ತೆ ಮತ್ತು ದಕ್ಷಿಣಕ್ಕೇ: ನಮ್ಮ ಜಾಗ ಎಂದು ನಮೂದು ಇದೆ. ಒ ಎಸ್65/2002 ರ ದಾವಾ ಸ್ವತ್ತಿನ ಚಕ್ಕುಬಂದಿಯನ್ನು ನಾವು ಪೂರ್ವಕಕ್ಕ್ಷ: ರಾಮೇಗೌಡರ ಖಾಲಿ ಸ್ವತ್ತು, ಪಶ್ಚಿಮಕ್ಕೇ:ರಾಮಕೃಷ್ಣರವರ ಖಾಲಿ ಸ್ವತ್ತು, ಉತ್ತರಕ್ಕೇ:ಚಲುವಯ್ಯನ ರಾಮೇಗೌಡರ ಸ್ವತ್ತು ಮತ್ತು ದಕ್ಷಿಣಕ್ಕೇ: ರಸ್ತೆ ಎಂದು ನಮೂದಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ವಾದಿಗಳ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ಫೋಟೊವನ್ನು ತೋರಿಸಲಾಗಿ ಸದರಿ ಫೋಟೊದಲ್ಲಿ ಕಾಣುವ ಜಾಗವು ದಾವಾ ಸ್ವತ್ತು ಎಂದು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಮತ್ತು ಅದರಲ್ಲಿ ಕಾಣುವ ಹಸುವಿಗೆ ಹುಲ್ಲು ಉಣಿಸುವ ಮಹಿಳೆಯು ವಾದಿಯ ಹೆಂಡತಿ ಎಂದು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು, ಸದರಿ **ಫೋಟೊವನ್ನು ನಿ ಪಿ 6** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ಸದರಿ ಸ್ವತ್ತು ನಮಗೆ ಸೇರಿರುತ್ತದೆ ಎಂದು ನುಡಿಯುತ್ತಾರೆ. ನಿ ಪಿ 6 ರಲ್ಲಿ ಕಾಣುವ ಮನೆಯ ಗೋಡಯು ನನ್ನ ಮನೆಯ ಹಿಂದಿನ ಗೋಡೆ ಇರುತ್ತದೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು ಗೋಡೆಯ ನಂತರ ನಾವು ಓಡಾಡಲು 30 ಅಡಿ ಜಾಗ ಬಿಟ್ಟುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಆ ರೀತಿ ನಾವು ಯಾವುದೇ ರಸ್ತೆ ಬಿಟ್ಟುಕೊಂಡಿರುವುದಿಲ್ಲ, ಸದರಿ ಮನೆಯ ಮುಂಭಾಗದಲ್ಲಿ ನಮಗೆ ರಸ್ತೆ ಇದ್ದು, ಹಿಂಭಾಗದ ಆಸ್ತಿ ವಾದಿಗಳದ್ದು ಇರುತ್ತದೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಮತ್ತೊಂದು ಫೋಟೊವನ್ನು ತೋರಿಸಲಾಗಿ ಸದರಿ ಫೋಟೊದಲ್ಲಿ ಕಾಣುವ ಹುಲ್ಲು ಹಾಕಿದ ಜಾಗವು ದಾವಾ ಸ್ವತ್ತಿನ ಭಾಗ ಎಂದು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು, ಸದರಿ **ಫೋಟೊವನ್ನು ನಿ ಪಿ 7** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ಸದರಿ ಜಾಗದಲ್ಲಿ ನಾವೇ ಹುಲ್ಲು ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಜಾಗದಲ್ಲಿ ವಾದಿ ತಂತಿ ಬೇಲಿ ಹಾಕಿ ಅಲ್ಲಿ ಹಸುಗಳನ್ನು ಸಾಕುತ್ತಿದ್ದು ಮತ್ತು ಹಸುಗಳಿಗೆ ಹುಲ್ಲನ್ನು ಶೇಖರಿಸಿಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಂದೆ ವಾದಿಗಳ ಸದರಿ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ಕೊಟ್ಟ ಕಾರಣ ವಾದಿಗಳು ನನ್ನ ತಂದೆಯ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿಯು ಸುಳ್ಳು ದೂರು ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ಪೊಲೀಸರು ನಮ್ಮನ್ನು ಮತ್ತು ವಾದಿಗಳನ್ನು ಠಾಣೆಗೆ ಕರೆಸಿ ಸಿವಿಲ್ ನ್ಯಾಯಾಲಯದಲ್ಲಿ ನಮ್ಮ ವ್ಯಾಜ್ಯವನ್ನು ಪರಿಹರಿಸಿಕೊಳ್ಳುವಂತೆ ಸೂಚಿಸಿದ್ದರು ಎಂದರೆ ಸರಿ. ನಂತರ ನನ್ನ ತಂದೆ ವಾದಿಗಳು ದಾವಾ ಸ್ವತ್ತಿನಲ್ಲಿ ಹಾಕಿದ್ದ ಹುಲ್ಲಿನ ಮೆದೆ ಮತ್ತು ಸೌದೆಯನ್ನು ಅಲ್ಲಿಂದ ಎಳೆದು ಹಾಕಿದ್ದರು ಎಂದರೆ ಸರಿಯಲ್ಲ. ಅದರಂತೆ ನಮ್ಮ ಗ್ರಾಮದಲ್ಲಿ ಪಂಚಾಯಿತಿ ಆಗಿತ್ತು ಎಂದರೆ ಸರಿಯಲ್ಲ. ಸದರಿ ಪಂಚಾಯಿತಿಯಲ್ಲಿ ನಾವು ವಾದಿಗಳಿಗೆ ದಾವಾ ಸ್ವತ್ತಿನ ಅನುಭವಕ್ಕೆ ತೊಂದರೆ ಕೊಡುವುದಿಲ್ಲ ಎಂದು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಸ.ನಂ. 154/2 ಎ ರ ಸ್ವತ್ತು ಮೊದಲು ಅದು ಸ.ನಂ.154 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸ.ನಂ.154 ರ ಸ್ವತ್ತನ್ನು ದುರಸ್ಥಿ ಪೋಡಿ ಮಾಡಿಸಿದ ನಂತರ ನಮ್ಮ ಸ್ವತ್ತಿಗೆ ಸ.ನಂ.154/2 ಎ ಎಂದು ಹೊಸ ಸ.ನಂಬರ್ ಕೊಡಲಾಗಿದೆ ಎಂದರೆ ಸರಿ. ಸದರಿ ಸ್ವತ್ತಿನ ಭಾಗವನ್ನು ವಾದಿಗಳಿಗೆ ಮಾರಾಟ ಮಾಡುವಾಗ ಸದರಿ ಸ್ವತ್ತಿನ ಸ.ನಂ.154 ಎಂದು ಇತ್ತು ಎಂದರೆ ಸರಿಯಲ್ಲ. ಕಾಳೇಗೌಡರ ಮಕ್ಕಳಾದ

ನನ್ನ ತಂದೆ ಯಾದ ರಂಗೇಗೌಡ, ಅಣ್ಣೇಗೌಡ ಮತ್ತು ನಿಂಗೇಗೌಡರು ತಮ್ಮ ನಡುವೆ ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತಾರೆ ಅದರಂತೆ ಸದರಿ ಸ.ನಂ.154/2 ಎ ಸ್ವತ್ತು ನಮಗೆ ಬಂದಿರುತ್ತದೆ ಎಂದು ನಾನು ನನ್ನ ಪ್ರತಿವಾದಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಆ ರೀತಿ ನಮಗೆ 4 ಗುಂಟೆ ಸ್ವತ್ತು ಬಂತು ಎಂದು ಹೇಳಲು ನಾನು ಪಂಚಾಯಿತಿಯಲ್ಲಿ ನಮ್ಮ ತಂದೆ ಹೆಸರಿಗೆ ಖಾತೆ ಆಗಿರುವ ದಾಖಲೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆ ರೀತಿಯ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾವು ಸೌದೆ, ಗೊಬ್ಬರ ಮತ್ತು ವ್ಯವಸಾಯದ ಸಲಕರಣೆಗಳನ್ನು ಶೇಖರಿಸಿ ಒಂದು ಭಾಗದಲ್ಲಿ ಮನೆಯನ್ನು ಕಟ್ಟಿರುವುದಾಗಿ ಹೇಳಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

ನಾನು ಹೇಳುವ ಎ ಡಿ ಎಲ್ ಆರ್ ರವರಿಂದ ಸರ್ವೆ ಮಾಡಿಸುವ ಪೂರ್ವದಲ್ಲಿ ನಾನು ವಾದಿಗಳಿಗೆ ನೋಟಿಸು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರಿದು ಸದರಿ ಸರ್ವೆಯನ್ನು ನನ್ನ ತಂದೆಯೇ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿ ಡಿ 1 ರ ದಾಖಲೆಯು ನಾವು ವಾಸವಿರುವ ಮನೆಯ ಡಿಮಾಂಡ್ ರಿಜಿಸ್ಟರ್ ದಾಖಲೆ ಇರುತ್ತದೆ ಎಂದರೆ ಸರಿ. ನಿ ಡಿ 1 ರಿಂದ 3 ದಾಖಲೆಗಳು ನಮ್ಮ ಮನೆಗೆ ಸಂಬಂಧಿಸಿದ ಡಿಮಾಂಡ್ ರಿಜಿಸ್ಟರ್ ಗಳಾಗಿರುತ್ತವೆ ಎಂದರೆ ಸರಿ. ನಿ ಡಿ 1

ರಿಂದ 3 ರಲ್ಲಿ ಸದರಿ ಆಸ್ತಿಗಳು ಸ.ನಂ.154 ರಮೂಲ ಆಸ್ತಿಯಿಂದ ಉದ್ಭವಿಸಿದ ಆಸ್ತಿಯಾಗಿರುತ್ತದೆ ಎಂದು ಎಲ್ಲಿಯೂ ನಮೂದು ಇಲ್ಲ ಎಂದರೆ ಸರಿ.



ಅದೇ ರೀತಿ ನಾನು ಮೇಲೆ ಹೇಳಿದಂತೆ ವಿಭಾಗದ ಮೂಲಕ ನನ್ನ ತಂದೆಗೆ ಸದರಿ ಆಸ್ತಿಯ ಖಾತೆ ಆಗಿರುವ ಬಗ್ಗೆ ನಿ ಡಿ 1 ರಿಂದ 3 ರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ನಿಡಿ 4 ರ ದಾಖಲೆಯು ನಿ ಡಿ 1 ರ ಆಸ್ತಿಗೆ ಕಟ್ಟಿದ ಕಂದಾಯ ಪಾವತಿ ರಶೀದಿ ಇರುತ್ತದೆ ಎಂದರೆ ಸರಿ.

ಒ ಎಸ್ ನಂ.65/2002 ರ ದಾವೆಯನ್ನು ನನ್ನ ತಂದೆ ಪ್ರಸ್ತುತ ದಾವೆಯ ಮೇಲೆಯೇ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಂದೆ ವಾದಿಯ ಹೆಸರನ್ನು ಶ್ರೀಧರ ಬಿನ್ ಬಿ ಆರ್ ರಂಗೇಗೌಡ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಸದರಿ ವಾದಪತ್ರದ ಪ್ರಕಾರ ವಾದಿ ರಂಗೇಗೌಡರ ಮಗ ಎಂದು ನಾವು ಒಪ್ಪಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ವಾದಿ ರಂಗೇಗೌಡರ ಸಾಕುಮಗ ಇರುತ್ತಾರೆ ರಂಗೇಗೌಡರಿಗೆ ಸ್ವಂತ ಗಂಡು ಮಕ್ಕಳು ಇರುವುದಿಲ್ಲ ಅವರಿಗೆ ಸ್ವಂತ ಹೆಣ್ಣುಮಗಳು ಇದ್ದಾರೆ ಎಂದು ನುಡಿಯುತ್ತಾರೆ. 2 ನೇ ವಾದಿಯಾದ ಬೆಟ್ಟಮ್ಮ ರಂಗೇಗೌಡರ ಮಗಳು ಇರುತ್ತಾರೆ ಎಂದರೆ ಸರಿ. 2002 ರಲ್ಲಿ ನನ್ನ ತಂದೆ ಹೂಡಿದ ದಾವೆಯ ವಾದಪತ್ರದಲ್ಲಿ ವಾದಿಯು ರಂಗೇಗೌಡರ ಸಾಕುಮಗ ಎಂದು ಎಲ್ಲೂ ನಮೂದಿಸಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ನಾವು ಏಕಪಕ್ಷೀಯವಾಗಿ ತೀರ್ಪು ಪಡೆದುಕೊಂಡಿರುತ್ತೇವೆ ಎಂದರೆ ಸರಿ.

ಒ ಎಸ್ ನಂ.65/2002 ರ ಸ್ವತ್ತು ಮತ್ತು ಪ್ರಸ್ತುತ ದಾವಾ ದ ಸ್ವತ್ತು ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ಪ್ರಸ್ತುತ ದಾವಾ ಸ್ವತ್ತಿನ ಚಕ್ಕುಬಂದಿ ಮತ್ತು ಒ ಎಸ್ 65/2002 ರ ಸ್ವತ್ತಿನ ಚಕ್ಕುಬಂದಿ ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ನಿ ಡಿ 12 ರ ದಾಖಲೆಯಂತೆ ಒಟ್ಟು 20 ಗುಂಟೆಯಲ್ಲಿ ನನ್ನ ತಂದೆಗೆ 4 ಗುಂಟೆ ಬಂದಿರುವ ದಾಖಲೆ ಇರುತ್ತದೆ. ವಾದಿಗಳು 1970 ರ ಕ್ರಯಪತ್ರದಂತೆ ಅಂದಿನಿಂದ ಇಂದಿನವರೆಗೂ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು ನಾವುಗಳು ಅವರಿಗೆ ವಿನಾ ಕಾರಣ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯು ಮತ್ತು ಅದರ ಪೂರ್ವದಲ್ಲಿ ವಾದಿಯ ತಂದೆ 1970 ರ ಕ್ರಯಪತ್ರದಂತೆ ತಮ್ಮ ಹೆಸರಿಗೆ ದಾವಾ ಸ್ವತ್ತಿನ ಖಾತೆ ಮಾಡಿಕೊಡುವಂತೆ ಪಂಚಾಯಿತಿಗೆ ಸಲ್ಲಿಸಿದ ಅರ್ಜಿಗೆ ನಾನು ಮತ್ತು ನನ್ನ ತಂದೆ ತಕರಾರು ಸಲ್ಲಿಸಿರುತ್ತೇವೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಸದರಿ ಅರ್ಜಿ ಕಾನೂನುಬಾಹಿರ ಇರುವ ಕಾರಣ ನಾವು ತಕರಾರು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಅದರಂತೆ ಗ್ರಾಮ ಪಂಚಾಯಿತಿಯವರು ನಮ್ಮ ವ್ಯಾಜ್ಯವನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಂಡು ಬಂದ ನಂತರ ಖಾತೆ ಮಾಡುವುದಾಗಿ ನಮಗೆ ಹೇಳಿರುತ್ತಾರೆ

ಎಂದರೆ ಸರಿ, ಸಾಕ್ಷಿಯು ಮುಂದುವರಿದು 2002 ರಲ್ಲಿ ನಮ್ಮಂತೆ ತೀರ್ಪಾದ ನಂತರ ನಾವು ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.



ನಾನು ಹಾಜರುಪಡಿಸಿರುವ ಯಾವುದೇ ದಾಖಲೆಗಳಲ್ಲಿ ಒ ಎಸ್ 65/2002 ರ ತೀರ್ಪಿನ ಆಧಾರದ ಮೇಲೆ ನನ್ನ ತಂದೆಗೆ ಅಥವಾ ನನ್ನ ಹೆಸರಿಗೆ ಖಾತೆ ಇರುವುದಾಗಿ ನಮೂದು ಇರುವುದಿಲ್ಲ ಎಂದರೆ ಗೊತ್ತಿಲ್ಲ. ಅದೇ ರೀತಿ ಸದರಿ ತೀರ್ಪಿನಲ್ಲಿ ಪಂಚಾಯಿತಿ ಅಧಿಕಾರಿಗಳು ನಮ್ಮ ಹೆಸರಿಗೆ ಖಾತೆ ಮಾಡಿಕೊಡಬೇಕೆಂದು ನಿರ್ದೇಶನ ಕೊಟ್ಟಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಸ್ವತ್ತನ್ನು ನಾವು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ .ಎಫ್ .ಸಿ ., ತಿ .ನರಸೀಪುರ**